ಮೈಸೂರು ಡಿಸ್ಟ್ರಿಕ್ಟ್.

ನಂ. 8. ತಾರೀಖು 11ನೇ ನವಂಬರ್ 1885.

ಡಿಸ್ಟ್ರಿಕ್ಟ್ ಮಜಕೂರ್ ಅರಕಲ್‌ಗೂಡ್ ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಇದರ ಕೆಳಗೆ ನಮೂದಿಸಿರುವ ದಸ್ತ್ಯೆವಜುಗಳನ್ನ ಕ್ರಮವಾದ ವಾರಸುವಾರ್ತಾಗಲಿ ಅಥವಾ ಅಧಿಕಾರಹೊಂದಿದ ಮೂಕ್ತಾರೀಕನಾಗಲಿ ಈ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಸದರೀ ಆಫೀಸಿಗೆ ಹಾಜರಾಗಿ ವಾಪಸ್ ಪಡಿಯಬೇಕು, ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟ್ 85ನೇ ಸೆಕ್ಷನ್ ಮೇರಿಗೆ ನಾಶಪಡಿಸಲ್ಪಡುವದು.

ದಸ್ತ್ಯೆವಜ್ ನಂಬರ್.	ದಸ್ತ್ಯೆವಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತ್ಯೆವಜು ಬರಸಿ ಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಬಾಜರಾದ ತಾರೀಖು.	ರಿಜಿಸ್ಟ್ರಾರ ತಾರೀಖು	ದಸ್ತಾವೇಜಿನ, ಸ್ವಭಾವ ವ ಕಿಮ್ಮತ್ತು.
1882—83 268	ಸ್ವಮಾನ್ಯ ತರಿಗಳಲೆ ಗ್ರಾಮದಲ್ಲಿರುವ ಹಾನಗಲ್ಲು ಕೆಂಚೇಗೌಡನ ಮಗ ಪುರಾಯಿತಿ ಕಸಬಿನ ಹಾಟ್ಯಾ 1 ಕೆಂಚೇಗೌಡನ ತಮ್ಮ ಜಡೆಗೌಡ 1 ಸಪ	ಸದರೀ ತರಿಗಳಲೆ ಗ್ರಾಮದಲ್ಲಿ ಯಿರುವ ಜಿ ಮವಲ್ಲಿ ರಂಗೇಗೌಡನ ಮಗ ಜೊನ್ನೇಗೌಡ	14ನೇ ಅಕ್ಟೋಬರ್ 1882	14ನೇ ಅಕ್ಟೋಬರ್ 1882	100 ರೂಪಾಯಿನ ಜಮ್ಮಾ ಕ್ರಯಪತ್ರ.
1882—83 329	ಅರಕಲ್‌ಗೂಡ್ ತಾಲ್ಲೂಕು ಗೊರೂರಲ್ಲಿ ಇರುವ ದೊಡ್ಡಬೈರಯ್ಯನ ಮಗ ಪುಟ್ಟಸಾಮಯ್ಯ	ಸದರೀ ಗೊರೂರಲ್ಲಿ ಇರುವ ಶ್ರೀವೈಷ್ಣವ ಬ್ರಾಂಪಣ ಜಲುವ ಯ್ಯನವರ ಮಗ ಶ್ರೀ ಷ್ಣಪ್ಪ	25ನೇ ನವಂಬರ್ 1882	26ನೇ ನವಂಬರ್ 1882	45 ರೂಪಾಯಿನ ಮನೆ ಕ್ರಯ ಪತ್ರ.

ಅಬ್ದುಲ್‌ಖಾದರ್, ಕೆ. ಬಿ.,
ರಿಜಿಸ್ಟ್ರಾರ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟ್‌ನಿಂದ.

1885ನೇ ಇಸವಿ ಮಿಸಲೇನಿಯಸ್ ನಂಬರ್ 489.

ಮೃತಪಟ್ಟ ಪಾವಗಡದ ಮನವಾರ್ತೆ ೀನಪ್ಪನ ಜಿಂದಗಿ ವಿಷಯದಲ್ಲಿ—

ಅರ್ಜೀದಾರ್ ಶಿರಾ ತಾಲ್ಲೂಕು ಮಾಜಿಸ್ಟ್ರೇಟ್ ಗುಮಾಸ್ತೆ ವೆಂಕಟರಾವು, ಮೃತಪಟ್ಟ ಪಾವಗಡದ ಮನವಾರ್ತೆ ೀನಪ್ಪನು ತನಿಗೆ ಚಿಕ್ಕಪ್ಪನಾಗಬೇಕೆಂಬ, ಹಕ್ಕುದಾರೀ ಮೇಲೆ ಸದರೀ ಮೃತಪಟ್ಟ ೀನಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಪ್ರಕಾರ ಸರ್ಟಿಫಿಕೇಟ್ ಕೊಡಿಸಬೇಕೆಂದು ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತನ್ನು 1885ನೇ ಇಸವಿ ನವಂಬರ್ ತಿಂಗಳು 1ನೇ ತಾರೀಖಿನಲ್ಲಿ ಕೆಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿವರಿಸಿ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ [illegible] ವಿಷ್ಯರೂ ಈ ಕೋರ್ಟ್‌ನಲ್ಲಿ ಹಾಜರು ಯಿರಬೇಕೆಂದು ಯಿವರಿಂದ ತಿಳಿಯಪಡಿಸಿದೆ.

ತಾರೀಖು 10ನೇ ಮಾಹೆ ನವಂಬರ್ 1885ನೇ ಇಸವಿ.

1885ನೇ ಇಸವಿ

ಬೆಂಗಳೂರು ವಾಸಸ್ಥನಾಗಿ ಯಿದ್ದ ಮೃತ [illegible] ಯದಲ್ಲಿ—

ಅರ್ಜೀದಾರ್ ಗಳುವಿನ ಅಂಗಡಿ ಹಾಜಿ ಸೈದ್ ಇಸ [illegible] ಮಾನುದ್ದೀನ್ ಸಾಬಿ ತನಿಗೆ ತಂದೆ ಆರಬೇಕೆಂಬ ಹಕ್ಕುದಾರೀ ಮೇಲೆ ಸದರೀ ಅಮಾನುದ್ದೀನ್ ಸಾ [illegible] 200 ರೂಪಾಯಿಗಳ ಸಾಲವನ್ನು ವಸೂಲ್ [illegible]